3. ಶಿಕ್ಷಣ ಮತ್ತು ವಾಚಾನಾಲಯ ಸೌಲಭ್ಯ ಮತ್ತು ಕಂಪ್ಯೂಟರ್ ತರಬೇತಿ.
4. ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸುವಿಕೆ.
5. ಪೆರೋಲ್ ಮತ್ತು ಫರ್ಲೋ ತಾತ್ಕಾಲಿಕ ಬಿಡುಗಡೆ.
6. ಸಾಮಾನ್ಯ ಮತ್ತು ಮಾನಸಿಕ ವೈದ್ಯಕೀಯ ಸೌಲಭ್ಯಗಳು
7. ಧಾರ್ಮಿಕ ಗುರುಗಳಿಂದ ಪ್ರವಚನ, ಯೋಗ ಮತ್ತು ಪರಿವರ್ತನಾ ಶಿಬಿರಗಳು

ಶಿವಮೊಗ್ಗ ತಾಲ್ಲೂಕು ಸರಾಯಿ ಮಾರಟ ಗುತ್ತಿಗೆ

1324 (922) ಶ್ರೀ ಚಂದ್ರಶೇಕರಪ್ಪ ಹೆಚ್.ಎಂ. (ಶಿವಮೊಗ್ಗ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು ಸಾರಾಯಿ ಗುತ್ತಿಗೆ ಹರಾಜು ಎಷ್ಟು ಮೊತ್ತಕ್ಕೆ ನೀಡಲಾಗಿರುತ್ತದೆ?

ಆ) ಸಾರಾಯಿ ಗುತ್ತಿಗೆದಾರರು ನಿಗದಿತ ಅವಧಿಯಲ್ಲಿ ಮಾಸಿಕ ಬಿಡ್ ಕಂತನ್ನು ಪಾವತಿ ಮಾತುತಿದ್ದಾರೆಯೇ? ಇಲ್ಲದಿದ್ದಲ್ಲಿ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿರುತ್ತದೆ? (ವಿವರ ನೀಡುವುದು)

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ಮಾಸಿಕ ರೂ. 81.12,000/-

ಆ) ಇಲ್ಲ.

ಗುತ್ತಿಗೆದಾರರು ಡಿಸೆಂಬರ್ 2002 ರ ವರೆಗೆ ಬಾಡಿಗೆ ಪಾವತಿ ಮಾಡಿದ್ದಾರೆ. ಇಲಾಖೆಯ ಬಳಿ ಗುತ್ತಿಗೆದಾರರು ಪಾವತಿಸಿರುವ ಇ.ಎಂ.ಡಿ. ಮತ್ತು ಬ್ಯಾಂಕ್ ಗ್ಯಾರಂಟಿ ಒಟ್ಟು 4 1/2 ತಿಂಗಳುಗಳ ಸಮನಾದ ಬಾಡಿಗೆ ಮೊತ್ತದ ಭದ್ರತೆ ಇದೆ. ಆದಾಗ್ಯೂ ಕರ್ನಾಟಕ ಅಬಕಾರಿ ಕಾಯ್ದೆ 1965 ಮತ್ತು ಕರ್ನಾಟಕ ಅಬಕಾರಿ ಸನ್ನದು (ಸಾಮಾನ್ಯ ಷರತ್ತು) ನಿಯಮಗಳು, 1968ರ ಅನ್ವಯ ಗುತ್ತಿಗೆ ರದ್ದುಪಡಿಸುವ ಬಗ್ಗೆ ಕಾರಣ ಕೇಳುವ ನೋಟೀಸ್ ಅನ್ನು ಗುತ್ತಿಗೆದಾರರ ಮೇಲೆ ಜಾರಿ ಮಾಡಲಾಗಿದೆ.

ಕೊರಟಗೆರೆ ತಾಲ್ಲೂಕಿನ ಪಟ್ಟಣ ಪಂಚಾಯ್ತಿ ಅಭಿವೃದ್ಧಿ

1325 (904) ಶ್ರೀ ಚನ್ನಿಗಪ್ಪ (ಕೊರಟಗೆರೆ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊರಟಗೆರೆ ತಾಲ್ಲೂಕಿಗೆ ಕಳೆದ ಮೂರು ವರ್ಷಗಳಿಂದ ಪಟ್ಟಣಪಂಚಾಯತಿ ಅಭಿವೃದ್ಧಿಗಾಗಿ ಯಾವ ಯಾವ ಯೋಜನೆಯಲ್ಲಿ ಅನುದಾನವನ್ನು ಎಷ್ಟು ಪ್ರಮಾಣದಲ್ಲಿ ಮಂಜೂರು ಮಾಡಲಾಗಿದೆ; (ವಿವರ ಒದಗಿಸುವುದು) :

ಆ) ಮಂಜೂರಾದ ಹಣವನ್ನು ಯಾವ ಯಾವ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಿ ಪೂರೈಸಲಾಗಿದೆ; (ವಿವರ ಒದಗಿಸುವುದು)

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ (ಪೌರಾಡಳಿತ ರಾಜ್ಯ ಸಚಿವರು) :

ಅ) ವಿವರಗಳು ಕೆಳಗಿನಂತಿವೆ:

ಕಾರ್ಯಕ್ರಮ	2000 - 01	2001- 02	2002 - 03
1. ಉದ್ಯೋಗ ಕಾರ್ಯಕ್ರಮ	-	45,970/-	-

1	2	3	4
2. ಸಾಮಾಜಿಕ ಸೇವಾ ಕಾರ್ಯಕ್ರಮ	-	13,836/-	-
3. ತರಬೇತಿ ಕಾರ್ಯಕ್ರಮ	-	-	24,697/-
4. ಮೂಲಭೂತ ಅಭಿವೃದ್ಧಿಗಾಗಿ ಹುಡ್ಕೋ ಸಾಲ	25,00,000/-	-	-

ಅ) ಉದ್ಯೋಗ ಕಾರ್ಯಕ್ರಮದಡಿ

1) 1ನೇ ವಾರ್ಡ್ ಚರಂಡಿ ಕಾಮಗಾರಿ

2) 2ನೇ ವಾರ್ಡ್ ಚರಂಡಿ ಕಾಮಗಾರಿ

ಸಾಮಾಜಿಕ ಸೇವಾ ಕಾರ್ಯಕ್ರಮದಡಿ

1) 3 ಅಂಗನವಾಡಿ ಕೇಂದ್ರಗಳಿಗೆ ಕಪಾಟು ಸರಬರಾಜು

ತರಬೇತಿ

1) ತರಬೇತಿ ಕಾರ್ಯಕ್ರಮಗಳು

ಹುಡ್ಕೋ ಸಾಲದ ನೆರವಿನಡಿ

ಹುಡ್ಕೋ ಸಾಲದ ನೆರವಿನಡಿ

1) ಗಿರಿನಗರ ಹರಿಜನ ಕಾಲೋನಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ

2) ಹೊಸ ಬಡಾವಣೆ ಅಭಿವೃದ್ಧಿ ರಸ್ತೆ ಅಭಿವೃದ್ಧಿ ಕಾಮಗಾರಿ

3) ಕೊರಟಗೆರೆ ಮಧುಗಿರಿ ರಸ್ತೆಯಿಂದ ವೆಂಕಟರಮಣ ಸ್ವಾಮಿ ದೇವಸ್ಥಾನದವರೆಗೆ ರಸ್ತೆಚರಂಡಿ ಮತ್ತು ಟಾಂಬರೀಕರಣ ಕಾಮಗಾರಿ

ಕೊರಟಗೆರೆ ತಾಲ್ಲೂಕಿನಲ್ಲಿ ಕೆರೆಗಳ ಹೂಳು ತೆಗೆಯುವುದು

1326 (905) ಶ್ರೀ ಚನ್ನಿಗಪ್ಪ (ಕೊರಟಗೆರೆ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊರಟಗೆರೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ವ್ಯಾಪ್ತಿಗೆ ಬರುವ ಕೆರೆಗಳ ಸಂಖ್ಯೆ ಎಷ್ಟು;

ಆ) ಈ ಕೆರೆಗಳಲ್ಲಿ ನೀರಿನ ಸಂಗ್ರಹಣೆ ಮಟ್ಟವನ್ನು ಕಾಪಾಡಲು ಯಾವ ಯಾವ ಯೋಜನೆಯಡಿಯಲ್ಲಿ ಅನುದಾನವನ್ನು ಮಂಜೂರು ಮಾಡಿ ಹೂಳನ್ನು ತೆಗೆಯಲಾಗುವುದು; ಮಂಜೂರು ಮಾಡುವ ಅನುದಾನದ ಪ್ರಮಾಣವೆಷ್ಟು;

ಇ) ಅಧಿಕ ಪ್ರಮಾಣದಲ್ಲಿ ಹೂಳು ತುಂಬಿರುವ ಕೆರೆಗಳಲ್ಲಿ ತುರ್ತಾಗಿ ಹೂಳನ್ನು ತೆಗೆಸಿ ಈ ಹಿಂದುಳಿದ ಭಾಗದ ರೈತಾಪಿ ವರ್ಗದವರಿಗೆ ನೀರಿನ ಸಂಗ್ರಹಣೆ ಅನುಕೂಲತೆ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮವೇನು?